ISSN: 2582-2284

ಸಂಪುಟ 2 ಸಂಚಿಕೆ 1 ಜುಲೈ – ಆಗಸ್ಟ್ 2020

# ಪ್ರತಿಬಿಂಬ

## MULTIDISCIPLINARY KANNADA RESEARCH JOURNAL OF IIMRD

Peer Reviewed and Referred Kannada Journal

IIMRD JOURNALS

ಭಾರತೀಯ ಬಹುಶಿಸ್ತೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ
ಮೈಸೂರು

| Sl. No. | ಅನುಕ್ರಮಣಿಕೆ | ಪು.ಸಂ. |
|---|---|---|
| 1. | ಮೈಸೂರು ಒಡೆಯರ ಕಾಲದ ಶಾಸನಗಳು: ಒಂದು ಸಮೀಕ್ಷೆ – ದಿಲೀಪ್. ಎಸ್. – ಪ್ರೊ. ಮಹಾದೇವಿ | 1–10 |
| 2. | ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಪಾತ್ರ – ಶಿವಶರಣಪ್ಪ | 11–16 |
| 3. | ಬೆಳಗಾವಿ ಜಿಲ್ಲೆಯ ಪಾತ್ರೋಟಿ ಸಮುದಾಯ: ಒಂದು ಚಿಂತನೆ – ಶಿವಾನಂದ ಹೆಳವರ – ಡಾ. ಎಚ್.ಇ. ಬಸವರಾಜಪ್ಪ | 17–21 |
| 4. | ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳ ವಿಶೇಷ ಗ್ರಾಮಸಭೆಯ ಪರಿಣಾಮಕಾರಿ ಅನುಷ್ಠಾನ: ಒಂದು ವಿಶ್ಲೇಷಣೆ – ಡಾ. ಹೇಮಾಂಬರ ಎಚ್.ಎಸ್ | 22–28 |
| 5. | ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂವಿಧಾನ ಮತ್ತು ರೂಪುರೇಷೆಗಳು – ಡಾ. ಕೆ. ಗುರುಸ್ವಾಮಿ | 29–46 |
| 6. | ಚಾಮರಾಜನಗರ ಜಿಲ್ಲೆಯ ಶಾಸನಗಳಲ್ಲಿ ಕೃಷಿ, ವ್ಯಾಪಾರ ಮತ್ತು ಆರ್ಥಿಕ ಅಂಶಗಳು: ಒಂದು ಅಧ್ಯಯನ – ಸುರೇಶ ಎಸ್ | 47–52 |
| 7. | ಶ್ರೀ ರಾಮಾಯಣದರ್ಶನಂನಲ್ಲಿ "ದಶಾನನ ಸ್ವಪ್ನಸಿದ್ಧಿ": ಒಂದು ಮನೋವೈಜ್ಞಾನಿಕ ವಿಶ್ಲೇಷಣೆ – ಡಾ.ಸೋಮಶೇಖರ | 53–62 |
| 8. | ಶರಣ ಪರಂಪರೆಯ ಚಿಕ್ಕದಣ್ಣನಾಯಕ ಚೆನ್ನಬಸವಣ್ಣನ ವ್ಯಕ್ತಿತ್ವ – ಡಾ ಎಸ್. ಬಿ. ರಾಠೋಡ | 63–70 |
| 9. | ಮ್ಯಾಸಬೇಡ ಬುಡಕಟ್ಟು ಸಮುದಾಯದಲ್ಲಿ ಹೈನು ಸಂಪ್ರದಾಯ: ಒಂದು ಸಾಂಸ್ಕೃತಿಕ ಅಧ್ಯಯನ – ಡಾ ನಾಗೇಶ ಎಂ. | 71–77 |
| 10. | ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ ಜೀವನ – ಡಾ. ಶ್ರೀನಿವಾಸ್. ವಿ. | 78–88 |
| 11. | ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರ ಸಮುದಾಯದ ತತ್ವಪದಕಾರರು: ಒಂದು ಅಧ್ಯಯನ – ಪ್ರಹ್ಲಾದ ಡಿ.ಎಂ. – ವೀಣಾ ಕೆ.ಆರ್. | 89–97 |
| 12. | ಜ್ಯೋತಿರಾವ್ ಫುಲೆರವರ ಜೀವನ ಹಾಗೂ ಸಾಮಾಜಿಕ ಆಂದೋಲನಗಳು – ರಾಜಶೇಖರ ಮಾವಿನಮರ | 98–106 |
| 13. | ನಾಗ ಸಾಧು ಮತ್ತು ಅಘೋರಿಗಳ ಬದುಕು – ಪ್ರವೀಣ ಕುಮಾರ ಬಿ. | 107–114 |

ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-2, Issue 1, JUL-AUG 2020
©IIMRD, Mysuru
IIMRD JOURNALS
www.iimrd.com

# ಶರಣ ಪರಂಪರೆಯ ಚಿಕ್ಕದಣ್ಣನಾಯಕ ಚೆನ್ನಬಸವಣ್ಣನ ವ್ಯಕ್ತಿತ್ವ

ಡಾ ಎಸ್. ಬಿ. ರಾಠೋಡ[1]

## ಪೀಠಿಕೆ

ಹನ್ನೆರಡನೆಯ ಶತಮಾನವು ಮಹಾಜ್ಞಾನಿಗಳ, ಯುಗಪುರುಷರ, ಪವಾಡ ಪುರುಷರ, ಸಮಾಜ ಸುಧಾರಕರ ಯುಗವೆಂದು ಕರೆಯಲಾಗುತ್ತದೆ. ಈ ಯುಗದ ಮಹಾಜ್ಞಾನಿಗಳ ಬಳಗದಲ್ಲಿ ಮಹಾಚೇತನ ಶಕ್ತಿಯಾಗಿ, ಧೃವ ನಕ್ಷತ್ರದಂತೆ ಮಿಂಚಿದಂತಹ ಅಕ್ಕನಾಗಮ್ಮ, ಶಿವದೇವ ದಂಪತಿಗಳ ಮಗನಾದ ಶ್ರೇಷ್ಠ ಜ್ಞಾನಿ ಚೆನ್ನಬಸವ. ಈತನು ಬಸವೇಶ್ವರನ ಸೋದರಳಿಯ, ಅಲ್ಲಮ ಪ್ರಭುವಿನಿಂದ 'ಮಹಾಜ್ಞಾನಿ' ಎಂದು ಹೊಗಳಿಸಿಕೊಂಡ ಶರಣ. ಈತನಿಗೂ ಜಾತವೇದಮುನಿಗಳಿಂದ ಶಿಕ್ಷಣ ದೊರೆತದ್ದು ವಿಶೇಷ. ಚೆನ್ನಬಸವನು ಕಲ್ಯಾಣದ ಅನುಭವ ಮಂಟಪದ ಆಧಾರ ಸ್ತಂಭಗಳಲ್ಲಿ ಒಂದಾದವನು ಎಂದು ಹೇಳಿದರೆ ತಪ್ಪಾಗಲಾರದು. ಭಕ್ತಿಭಂಡಾರಿ ಬಸವಣ್ಣನವರಾದರೆ, ಜ್ಞಾನಮೂರ್ತಿ ಅಲ್ಲಮ ಪ್ರಭುದೇವ, ಧಾರ್ಮಿಕ ಸಿಧ್ಧಾಂತದ ಶಿಖಾಮಣಿ ಅಂದರೆ ಚೆನ್ನಬಸವಣ್ಣ ಎಂಬುವುದು ಎಲ್ಲ ವಿದ್ವಾಂಸರ ಅಭಿಮತ. ಇಡೀ ಶರಣ ಸಮುದಾಯ ಬಸವಣ್ಣನವರನ್ನು ದಣ್ಣನಾಯಕವೆಂದು ಕರೆದರೆ, ಚೆನ್ನಬಸವನನ್ನು ಚಿಕ್ಕದಣ್ಣನಾಯಕನೆಂದು ಕರೆದಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ. ಚೆನ್ನಬಸಣ್ಣವರು ಧಾರ್ಮಿಕ ಸಿಂದ್ಧಾತದ ಕುರಿತು ಮೌಲಿಕ ಗ್ರಂಥಗಳನ್ನು ರಚಿಸಿರುವುದು ಕಾಣುತ್ತೇವೆ. 'ಷಟ್ಸ್ಥಲ ವಚನ ಹಾಗೂ ಬೇರೆ ವಚನಗಳು' 'ಕರಣ ಹಸುಗೆ' 'ಮಿಶ್ರಾರ್ಪಣೆ' 'ಮಂತ್ರಗೋಪ್ಯ' 'ಕಾಲಜ್ಞಾನ' 'ರುದ್ರಭಾರತದ ದೃಷ್ಠಿ' ಇವು ಬಹು ಮಹತ್ವ ಪಡೆದುಕೊಂಡಿವೆ.

## ಚೆನ್ನಬಸವಣ್ಣನ ಕುರಿತು ರಚಿತವಾದ ಕೃತಿ ಮತ್ತು ತಂದೆ, ತಾಯಿ

ಈ ಯುಗದಲ್ಲಿ ಸುಪ್ರಸಿದ್ಧವಾದ ಶರಣರ ಕುರಿತು ಹಲವಾರು ಕವಿಗಳು ಹಲವಾರು ರೀತಿಯಲ್ಲಿ ಕೃತಿಗಳ ರಚನೆ ಮಾಡಿರುವುದು ಕಂಡುಬರುತ್ತದೆ. ಆದರೆ ಚೆನ್ನಬಸವಣ್ಣನವರ ಕುರಿತು ಬಹಳಷ್ಟು ಕೃತಿಗಳು ರಚಿತವಾಗದಿರುವುದೇ ವಿಷಾಧಿನಿಯ. ಶ್ರೇಷ್ಠ ರಗಳೆ–ಷಟ್ಪದಿ ಕವಿಗಳಾದ ಹರಿಹರ–ರಾಘವಾಂಕರು ಹಲವಾರು ಸುಪ್ರಸಿದ್ಧ ಶರಣರ ಚರಿತ್ರೆ ರಚನೆ ಮಾಡಿದರೂ, ಮಹಾಜ್ಞಾನಿ

*1 ಮುಖ್ಯಸ್ಥರು, ಕನ್ನಡ ವಿಭಾಗ ಹಾಗೂ ಸಂಶೋಧನಾ ಮಾರ್ಗದರ್ಶಕರು, ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ–586205.*